**ಬೆಂಗಳೂರು ವಿಶ್ವವಿದ್ಯಾಲಯ**
ಯುವ ರೆಡ್‌ಕ್ರಾಸ್ ಘಟಕ
**ಜ್ಞಾನಭಾರತಿ ಆವರಣ,**
**ಮೈಸೂರುರಸ್ತೆ, ಬೆಂಗಳೂರು-560056**

**ಸಂಖ್ಯೆ:** ಬೆಂ.ವಿ.ವಿ./ವೈ.ಆರ್.ಸಿ/2025/

**ದಿನಾಂಕ: 26 .05.2025**

## -:ಸುತ್ತೋಲೆ:-

ವಿಷಯ: ಬೆಂಗಳೂರು ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:1.YRC/ESR/Act/956/-990/2023-24 Dated:24-11-2023
2. ಕರ್ನಾಟಕ ಸರ್ಕಾರದ ನಡಾವಳಿಗಳು
3.YRC/CM/2522-2524/24-25 Dated: 11/02/2025

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಭಾರತೀಯ ರೆಡ್ ಕ್ರಾಸ್‌ಸಂಸ್ಥೆಯು ಕರ್ನಾಟಕ ಸರ್ಕಾರದ ನಡಾವಳಿಗಳಲ್ಲಿ ಸೂಚಿಸಿದಂತೆ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಯುವರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಬೇಕೆಂದು ಕರ್ನಾಟಕ ಸರ್ಕಾರದ ನಡಾವಳಿಗಳಲ್ಲಿ ಸೂಚಿಸಲಾಗಿದೆ. ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಯುವರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಲು ಒಮ್ಮೆ ಮಾತ್ರ 1,500/- ರೂಪಾಯಿಗಳನ್ನು ಭಾರತೀಯ ರೆಡ್ ಕ್ರಾಸ್‌ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಒಮ್ಮೆ ಪಾವತಿಸಿ ನೋಂದಾಯಿಸಿಕೊಳ್ಳಬೇಕು. ಈಗಾಗಲೇ 1,500/- ರೂಪಾಯಿಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಪಾವತಿಸಿ ನೋಂದಾಯಿಸಿ ಕೊಂಡಿರುವ ಕಾಲೇಜುಗಳು ಮತ್ತೇ ಪಾವತಿಸಿ ನೋಂದಾಯಿಸುವಂತಿಲ್ಲ. ನಂತರ ಹಾಗೂ ಬದಲು ಆದರೆ ಪ್ರತಿವರ್ಷ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರವೇಶ ಪಡೆಯುವ ಸಮಯದಲ್ಲಿ 50/- ರೂಪಾಯಿಗಳನ್ನು ಪಡೆದುಕೊಳ್ಳಬೇಕು. ಸಂಗ್ರಹಿಸಲಾದ ಶುಲ್ಕದಲ್ಲಿ 70% ರಷ್ಟನ್ನು ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗಾಗಿ ಉಪಯೋಗಿಸುವುದು. ಹಾಗೂಉಳಿದ 30% ಹಣವನ್ನುಡಿ.ಡಿ. ಅಥವಾ ಕ್ರಾಸ್‌ಮಾಡಿದ ಚೆಕ್ ಮೂಲಕ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಕಳುಹಿಸಿಕೊಡಬೇಕೆಂದು ಸೂಚಿಸಲಾಗಿದೆ. (Please note all cheques and DD should be drawn in favour of INDIAN RED CROSS SOCIETY – YOUTH RED CROSS).

ಒಂದು ವೇಳೆ ತಮ್ಮ ಕಾಲೇಜುಗಳನ್ನು ಈಗಾಗಲೇ ನೋಂದಾಯಿಸಿದ್ದರೆ, ಮತ್ತೊಮ್ಮೆ ನೋಂದಾಯಿಸುವ ಅವಶ್ಯಕತೆ ಇರುವುದಿಲ್ಲ. 2021-2022ನೇ ಸಾಲಿನಿಂದ, 2024-25ನೇ ಸಾಲಿನ ವರೆಗೆ ವಿದ್ಯಾರ್ಥಿಗಳಲ್ಲಿ ಸಂಗ್ರಹಿಸಿದ ಹಣವನ್ನು ಮತ್ತು 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರವೇಶದ ಸಮಯದಲ್ಲಿ ಯುವ ರೆಡ್‌ಕ್ರಾಸ್‌ಸದಸ್ಯತ್ವದ ಶುಲ್ಕರೂ. 50/-ಗಳನ್ನು ಪ್ರತಿಯೊಬ್ಬ (ಪ್ರಥಮ ಹಾಗೂ ಮಧ್ಯಂತರ ಸೆಮಿಸ್ಟರ್ ವಿದ್ಯಾರ್ಥಿಗಳು) ವಿದ್ಯಾರ್ಥಿಗಳಿಂದ ಸಂಗ್ರಹಿಸಿ, ಅದರಲ್ಲಿ 70% ಹಣವನ್ನು ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು. ಹಾಗೂ ಅದರಲ್ಲಿ ಉಳಿಕೆ 30% ಹಣವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ನಂ. 26, ರೆಡ್‌ಕ್ರಾಸ್ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001ಕ್ಕೆ ಈ ಕೆಳಕಂಡಂತೆ ತಲುಪಿಸುವಂತೆ ಸೂಚಿಸಲಾಗಿದೆ.

| ಕ್ರ.ಸಂ. | ಶೈಕ್ಷಣಿಕ ವರ್ಷ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಸಂದಾಯವಾದ ಮೊತ್ತ (ಒಬ್ಬವಿದ್ಯಾರ್ಥಿಯಿಂದ ರೂ.50/- ರಂತೆ) | ಯುವ ರೆಡ್‌ಕ್ರಾಸ್ ಘಟಕದಲ್ಲಿರಿಸಿ, ಅದರ ಕಾರ್ಯಕ್ರಮಗಳಿಗೆ ಬಳಸುವ ಶುಲ್ಕದ ಮೊತ್ತ 70% ( ರೂಪಾಯಿಗಳು 35/-) | ಪ್ರತಿಶತ 30% ( ರೂಪಾಯಿಗಳು 15/-) ರಷ್ಟು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರಿಗೆ ಕಳುಹಿಸಬೇಕಾಗುವ ಮೊತ್ತ | ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನರಹಿತ ಪ್ರಥಮದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಯುವ ರೆಡ್‌ಕ್ರಾಸ್‌ಘಟಕವನ್ನು ಪ್ರಾರಂಭಿಸಲು ಒಮ್ಮೆ ಮಾತ್ರ ಪಾವತಿಸಬೇಕಾದ ನೋಂದಣಿ ಶುಲ್ಕ 1,500/- ರೂಪಾಯಿಗಳು |
|---|---|---|---|---|---|
| 01 | 2021-22 | | | | |
| 02 | 2022-23 | | | | |
| 03 | 2023-24 | | | | |
| 04 | 2024-25 | | | | |

26/5/24

ಕುಲಸಚಿವರು

ಗೆ,

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು

ಪ್ರತಿಗಳು:

1. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂ.ವಿ.ವಿ.
2. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು- 560001.
3. ನೋಡಲ್ ಅಧಿಕಾರಿಗಳು, ಬೆಂಗಳೂರು ವಿಶ್ವ ವಿದ್ಯಾನಿಲಯ.
4. ಸಂಯೋಜಿತ ಕಾಲೇಜುಗಳ ಕಾರ್ಯಕ್ರಮಾಧಿಕಾರಿಗಳು, ಯುವ ರೆಡ್‌ಕ್ರಾಸ್ ಘಟಕ.
5. ಕಛೇರಿ ಪ್ರತಿ.